**RPAD**

Office of the Principal Direcotr,
Karnataka State Audit and Accounts Department,
T.T.M.C Building,
3rd floor, A Block, BMTC Shanthinagara,
Bengaluru-560 027.
Phone No:- 080- 22215273
Fax No.:- 080- 22216500
E-mail:1.controllerstateaccounts@yahoo.com
2.controllerksaad@gmail.com

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ,
3ನೇ ಮಹಡಿ, ಎ ಬ್ಲಾಕ್, ಬಿಎಂಟಿಸಿ ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22215273
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: 1.controllerstateaccounts@yahoo.com
2. controllerksaad@gmail.com

ಸಂಖ್ಯೆ: ರಾಲೆಪ 03 ಸಿಶೀಬ 2007-2018 / 3321 ದಿನಾಂಕ:15.02.2020

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಬೆರಳಚ್ಚುಗಾರರಿಗೆ ಶೀಘ್ರಲಿಪಿಗಾರರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು

ಉಲ್ಲೇಖ:
1. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2011 ಮತ್ತು ತಿದ್ದುಪಡಿ ನಿಯಮ 2015.
2. ದಿನಾಂಕ:16.05.2019ರಲ್ಲಿ ಪ್ರಕಟಿಸಿರುವ ಬೆರಳಚ್ಚುಗಾರರ ವೃಂದದ ಜೇಷ್ಠತಾ ಪಟ್ಟಿ
3. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಳಗಾವಿ ಇವರ ಪತ್ರ ದಿನಾಂಕ: 02.11.2019
4. ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಹಾಸನ, ಇವರ ಪತ್ರ ದಿನಾಂಕ:25.10.2019
5. ಈ ಕಚೇರಿ ಆದೇಶ ಸಂಖ್ಯೆ ರಾಲೆಪ:03/ಸಿಶೀಬ/2019 ದಿನಾಂಕ:15.02.2020

*****

<u>ಪ್ರಸ್ತಾವನೆ:</u>

ಶ್ರೀಮತಿ ವರ್ಷಾ ದೇವೇಂದ್ರಪ್ಪ ವಾಗುಕರ (ಜೇಷ್ಠತಾ ಸಂಖ್ಯೆ:04) ಮತ್ತು ಶ್ರೀಮತಿ ವಿದ್ಯಾ ಪಾಟೀಲ (ಜೇಷ್ಠತಾ ಸಂಖ್ಯೆ:07) ಇವರುಗಳು ಬೆರಳಚ್ಚುಗಾರರಾಗಿ ಕ್ರಮವಾಗಿ ದಿನಾಂಕ:27.05.2013 ಮತ್ತು 18.09.2014 ರಂದು ಸೇವೆಗೆ ಸೇರಿ ತೃಪ್ತಿಕರ ಸೇವೆಯನ್ನು ಪೂರೈಸಿರುತ್ತಾರೆ. ಸದರಿ ಉದ್ಯೋಗಿಗಳು ಉಲ್ಲೇಖ (1)ರ ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ 2011 ಮತ್ತು ತಿದ್ದುಪಡಿ ನಿಯಮ 2015ರಲ್ಲಿ ತಿಳಿಸಿರುವಂತೆ ಎಂ.ಎಸ್. ಆಫೀಸ್, ಪಂಚತಂತ್ರ, ಇ-ಗೌವರನೆನ್ಸ್ ತರಬೇತಿಯನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಕರ್ನಾಟಕ ನಾಗರಿಕ ಸೇವೆ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಗಳು, 1983ರಲ್ಲಿ ಶೀಘ್ರಲಿಪಿಗಾರರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಪಡೆದಿದ್ದು, ಶೀಘ್ರಲಿಪಿಗಾರರ ಹುದ್ದೆಗೆ ಬಡ್ತಿ ಹೊಂದಲು ಅರ್ಹರಿರುತ್ತಾರೆ. ಉಲ್ಲೇಖ(4) ಮತ್ತು(5) ರಲ್ಲಿ ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಳಗಾವಿ ಮತ್ತು ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಹಾಸನ ಇವರು ಕ್ರಮವಾಗಿ ಶ್ರೀಮತಿ ವರ್ಷಾ ದೇವೇಂದ್ರಪ್ಪ ವಾಗುಕರ ಮತ್ತು ಶ್ರೀಮತಿ ವಿದ್ಯಾ ಪಾಟೀಲ ಇವರಿಗೆ ಶೀಘ್ರಲಿಪಿಗಾರರ ಹುದ್ದೆಗೆ ಬಡ್ತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಆದೇಶ

## ::ಆದೇಶ::

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡ ಇಬ್ಬರು ಬೆರಳಚ್ಚುಗಾರರಿಗೆ ಅರ್ಹತೆ ಮತ್ತು ಜೇಷ್ಠತೆ ಆಧಾರದ ಮೇರೆಗೆ ಶೀಘ್ರಲಿಪಿಗಾರರ ಹುದ್ದೆಗೆ ವೇತನ ಶ್ರೇಣಿ ರೂ.27650-650-29600-750-32600-850-

36000-950-39800-1100-46400-1250-52650ರಲ್ಲಿ ಸ್ಥಾನಪನ್ನ ಬಡ್ತಿ ನೀಡಿ ಕಾಲಂ(4)ರಲ್ಲಿ ತಿಳಿಸಿರುವ ಸ್ಥಳಕ್ಕೆ ನಿಯೋಜಿಸಲಾಗಿದೆ. ಸ್ಥಾನಪನ್ನ ಮುಂಬಡ್ತಿ ನೀಡಿ ಕಾಲಂ(4)ರಲ್ಲಿ ತಿಳಿಸಿರುವ ಸ್ಥಳಕ್ಕೆ ನಿಯೋಜಿಸಲಾಗಿದೆ.

| ಕ್ರ ಸಂ | ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಕಚೇರಿ | ಜೇಷ್ಠತೆ ಸಂಖ್ಯೆ | ಶೀಘ್ರಲಿಪಿಗಾರರ ಹುದ್ದೆಗೆ ಬಡ್ತಿ ನೀಡಿ ನಿಯೋಜಿಸಿರುವ ಕಚೇರಿ |
|---|---|---|---|
| 1 | 2 | 3 | 4 |
| 1. | ವರ್ಷಾ ದೇವೇಂದ್ರಪ್ಪ ವಾಗುಕರ, ಅಪರ ನಿರ್ದೇಶಕರ ಕಚೇರಿ, ಪ್ರಾಂತೀಯ ಕಚೇರಿ, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಳಗಾವಿ. | 04 | ಜಂಟಿ ನಿರ್ದೇಶಕರ ಕಚೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಳಗಾವಿ ಇಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ ಹುದ್ದೆಗೆ. |
| 2. | ವಿದ್ಯಾ ಪಾಟೀಲ, ಹಿರಿಯ ಉಪನಿರ್ದೇಶಕರ ಕಚೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಹಾಸನ. | 07 | ಹಿರಿಯ ಉಪ ನಿರ್ದೇಶಕರ ಕಚೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಹಾಸನ ಇಲ್ಲಿ ಧಾರವಾಡ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಇಲ್ಲಿಂದ ಸ್ಥಳಾಂತರಿಸಿರುವ ಶೀಘ್ರಲಿಪಿಗಾರರ ಹುದ್ದೆಗೆ. |

ಈ ಬಡ್ತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿದೆ.

1. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 87 ದಿನಾಂಕ:07.07.1987ರಲ್ಲಿನ ನಿಬಂಧನೆಗಳಂತೆ ಈ ಆದೇಶ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಪ್ರಸ್ತುತ ಕಚೇರಿಯಿಂದ ಕರ್ತವ್ಯ ಮುಕ್ತಗೊಂಡು ನಿಯೋಜಿಸಲ್ಪಟ್ಟ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

4. ಮೇಲ್ಕಂಡ ನೌಕರರು ಮುಂದಿನ ಹುದ್ದೆಯ ಬಡ್ತಿಗೆ ನಿಗದಿಪಡಿಸಲಾದ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ನಿಯಮಾನುಸಾರ ಬಡ್ತಿಗೆ ಅರ್ಹರಾದಾಗ ಮಾಹಿತಿಯನ್ನು ಸ್ವಪ್ರೇರಣೆಯಿಂದ ಮೂಲ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಕಚೇರಿ ಮುಖ್ಯಸ್ಥರ ಮೂಲಕ ಈ ಕಚೇರಿಗೆ ಸಲ್ಲಿಸತಕ್ಕದ್ದು.

5. ಬಡ್ತಿ ಹೊಂದಿದ ನೌಕರರು ಕರ್ತವ್ಯ ಮುಕ್ತಗೊಂಡ ಕೂಡಲೇ ನಿಯಮಾನುಸಾರ ನಿಯೋಜಿತ ಕಚೇರಿಯಲ್ಲಿ ಸಕಾರಣವಿಲ್ಲದೇ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಬಡ್ತಿಯನ್ನು ನಿರಾಕರಿಸಿರುವರೆಂದು ಪರಿಗಣಿಸಲಾಗುವುದು.

6. ಬಡ್ತಿ ಹೊಂದಿರುವ ನೌಕರರು ಪ್ರಸ್ತುತ ಕಚೇರಿಯ ಬೆರಳಚ್ಚುಗಾರರ ಹುದ್ದೆಯಿಂದ ಕರ್ತವ್ಯ ಮುಕ್ತಗೊಂಡ ಹಾಗೂ ಬಡ್ತಿ ಮೇಲೆ ಶೀಘ್ರಲಿಪಿಗಾರರ ಹುದ್ದೆಗೆ ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಸಂಬಂಧಪಟ್ಟ ಕಚೇರಿ ಮುಖ್ಯಸ್ಥರು ಈ ಕಚೇರಿಗೆ ತಿಳಿಸುವುದು.

ಪ್ರಧಾನ ನಿರ್ದೇಶಕರು(ಪ್ರಭಾರ)
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು:</u>

1. ಅಪರ ನಿರ್ದೇಶಕರ ಕಚೇರಿ, ಪ್ರಾಂತೀಯ ಕಚೇರಿ, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಳಗಾವಿ- ಇವರಿಗೆ ಶ್ರೀಮತಿ ವರ್ಷಾ ದೇವೇಂದ್ರಪ್ಪ ವಾಗುಕರ, ಬೆರಳಚ್ಚುಗಾರರ ಡಿಪ್ಲೋಮಾ ಇನ್ ಕಮರ್ಷಿಯಲ್ ಅಂಕಪಟ್ಟಿ-07, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಪ್ರವೀಣ ದರ್ಜೆ ಕನ್ನಡ ಶೀಘ್ರಲಿಪಿ ಅಂಕಪಟ್ಟಿಗಳನ್ನು ಕಳುಹಿಸುತ್ತಾ ತಲುಪಿದ್ದಕ್ಕೆ ಸ್ವೀಕೃತಿ ಕೋರಿದೆ.
2. ಹಿರಿಯ ಉಪನಿರ್ದೇಶಕರ ಕಚೇರಿ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಹಾಸನ- ಇವರಿಗೆ ಶ್ರೀಮತಿ ವಿದ್ಯಾ ಪಾಟೀಲ, ಬೆರಳಚ್ಚುಗಾರರ ಡಿಪ್ಲೋಮಾ ಇನ್ ಕಮರ್ಷಿಯಲ್ ಅಂಕಪಟ್ಟಿ-07, ಎಸ್.ಎಸ್.ಎಲ್.ಸಿ ಅಂಕಪಟ್ಟಿ, , ಈ ಪತ್ರಕ್ಕೆ ಲಗತ್ತಿಸುತ್ತಾ ತಲುಪಿದ್ದಕ್ಕೆ ಸ್ವೀಕೃತಿ ಕೋರಿದೆ.
3. ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಧಾರವಾಡ.
4. ಶ್ರೀಮತಿ ವರ್ಷಾ ದೇವೇಂದ್ರಪ್ಪ ವಾಗುಕರ ಬೆರಳಚ್ಚುಗಾರರು, ಇವರಿಗೆ ಕ್ರಮ ಸಂಖ್ಯೆ: 1ರ ಕಚೇರಿ ಮೂಲಕ.
5. ಶ್ರೀಮತಿ ವಿದ್ಯಾ ಪಾಟೀಲ, ಬೆರಳಚ್ಚುಗಾರರು, ಇವರಿಗೆ ಕ್ರಮ ಸಂಖ್ಯೆ: 2ರ ಕಚೇರಿ ಮೂಲಕ.
6. ನೇಮಕಾತಿ ವಿಭಾಗ,
7. ವೈಯಕ್ತಿಕ ಕಡತಗಳಿಗೆ.
8. ಕಚೇರಿ ಅಧಿಕೃತ ಜ್ಞಾಪನ ಪುಸ್ತಕಕ್ಕೆ
9. ಕಚೇರಿ ಅಧಿಕೃತ ಜ್ಞಾಪನ ಕಡತಕ್ಕೆ.
10. ಹೆಚ್ಚುವರಿ ಪ್ರತಿ.
11. ಕಚೇರಿ ಪ್ರತಿ.